**CCE RR**
**UN-REVISED**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2018

**S.S.L.C. EXAMINATION, MARCH / APRIL, 2018**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 04. 04. 2018 ] ಸಂಕೇತ ಸಂಖ್ಯೆ : **62-K**

Date : 04. 04. 2018 ] CODE NO. : **62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

(ಹೊಸ ಪಠ್ಯಕ್ರಮ / New Syllabus)

(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)

[ ಗರಿಷ್ಠ ಅಂಕಗಳು : 80

[ Max. Marks : 80

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'**<br>**(ಗದ್ಯ, ಪದ್ಯ, ಪೋಷಕ ಅಧ್ಯಯನ)** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ (ವಾಕ್ಯ ರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 16 × 1 = 16 |
| 1. | ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ಮಿನಿ ಪೋಲೀಸ್ ನಗರದಲ್ಲಿ ತಮ್ಮ ಸಮಸ್ಯೆಯನ್ನು ಯಾರ ಬಳಿ ಹೇಳಿಕೊಂಡರು ?<br>*ಉತ್ತರ :*<br>ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು ತಮ್ಮ ಸಮಸ್ಯೆಯನ್ನು ಮಿನಿಪೋಲೀಸ್ ನಗರದ ಟ್ರಾಫಿಕ್ ಪೋಲೀಸಿನವನ ಬಳಿಯಲ್ಲಿ ಹೇಳಿಕೊಂಡರು. | |
| 2. | ರಾಜರತ್ನಂರವರು ತಿಳಿಸಿರುವಂತೆ ಕರ್ನಾಟಕದ ವಿಶಿಷ್ಟವಾದ ಗುಣ ಯಾವುದು ?<br>*ಉತ್ತರ :*<br>ರಾಜರತ್ನಂರವರು ತಿಳಿಸಿರುವಂತೆ ಕರ್ನಾಟಕದ ವಿಶಿಷ್ಟವಾದ ಗುಣ ಜನರ ಭಾಷಾ ಸಾಮರಸ್ಯ ಹಾಗೂ ಅನ್ಯಭಾಷಾ ಸಾಹಿತ್ಯಗಳನ್ನು ಸಕ್ರಿಯವಾಗಿ ಪುರಸ್ಕರಿಸುವುದಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿ ಮಾಡಿದ್ದೇನು ?<br>***ಉತ್ತರ :***<br>ಸತ್ಯಾಗ್ರಹಿಗಳನ್ನು ಚದುರಿಸಲು ಕುಲಕರ್ಣಿಯು ಗಾಳಿಯಲ್ಲಿ ಗುಂಡುಹಾರಿಸಿದನು. | |
| 4. | ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದದ್ದೇಕೆ ?<br>***ಉತ್ತರ :***<br>ಭಾರತದ ರೈತರು ಬೆಳೆದ ಏಲಕ್ಕಿ, ಮೆಣಸು, ಅಕ್ಕಿ ಮತ್ತು ನೇಯ್ದ ಬಟ್ಟೆಗಳು ಪೋರ್ಚುಗೀಸರನ್ನು ಬಹಳವಾಗಿ ಆಕರ್ಷಿಸಿದ್ದ ಕಾರಣಕ್ಕಾಗಿ ಪೋರ್ಚುಗೀಸರು ವ್ಯಾಪಾರಕ್ಕಾಗಿ ಭಾರತಕ್ಕೆ ಬಂದರು. | |
| 5. | ನಾ. ಕಸ್ತೂರಿಯವರದು ಯಾವ ಯಾವ ಕ್ಷೇತ್ರಗಳಲ್ಲಿ ಮರೆಯಲಾಗದ ಹೆಸರು ?<br>***ಉತ್ತರ :***<br>ಲಲಿತ ಪ್ರಬಂಧಗಳು ಮತ್ತು ಸ್ವಚ್ಛಂದ ಹರಟೆಗಳ ಕ್ಷೇತ್ರದಲ್ಲಿ ನಾ. ಕಸ್ತೂರಿಯವರದು ಮರೆಯಲಾಗದ ಹೆಸರು. | |
| 6. | ಯಾರು ಯಾರಲ್ಲಿ ಹರಿವ ನೆತ್ತರೊಂದೆ ಎಂದು ಕವಿ ನಿಸಾರ್ ಅಹಮದ್ ಹೇಳಿದ್ದಾರೆ ?<br>***ಉತ್ತರ :***<br>ಆಂಗ್ಲರು, ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೆ ಎಂದು ಕವಿ ನಿಸಾರ್ ಅಹಮದ್ ಹೇಳಿದ್ದಾರೆ. | |
| 7. | ಕವಿ ಬಿ.ಆರ್. ಲಕ್ಷ್ಮಣರಾವ್‌ರವರು ಸರ್ವಶಕ್ತ ದೂತನು ಯಾವಾಗ ಅವತರಿಸುವನು ಎಂದು ಹೇಳಿದ್ದಾರೆ ?<br>***ಉತ್ತರ :***<br>ಅಕ್ಷರವೆಂಬ ಜ್ಞಾನದೀಪವನ್ನು ಉಜ್ಜಿದಾಗ ಸರ್ವ ಶಕ್ತದೂತನು ಅವತರಿಸುವನೆಂದು ಕವಿ ಬಿ.ಆರ್. ಲಕ್ಷ್ಮಣರಾವ್‌ರವರು ಹೇಳಿದ್ದಾರೆ. | |
| 8. | ಮಕ್ಕಳಾದನಂತರ ಯಾವ ಚಿಂತೆ ಉಂಟಾಗುವುದಂದು ಅಂಬಿಗರ ಚೌಡಯ್ಯ ತಿಳಿಸಿದ್ದಾರೆ ?<br>***ಉತ್ತರ :***<br>ಮಕ್ಕಳಾದರೆ ಬದುಕಿನ ಚಿಂತೆ ಉಂಟಾಗುವುದೆಂದು ಅಂಬಿಗರ ಚೌಡಯ್ಯ ಹೇಳಿದ್ದಾರೆ. | |
| 9. | ಪುಲಿಗೆರೆ ಕವಿಸೋಮನು ಯಾವ ಸಾಮರ್ಥ್ಯವುಳ್ಳವನು ಯೋಗಿಯಾಗಬೇಕೆಂದು ಬಯಸುತ್ತಾನೆ ?<br>***ಉತ್ತರ :***<br>ಕಾಮ, ಕ್ರೋಧ ಮೊದಲಾದ ಅರಿಷಡ್ವರ್ಗಗಳನ್ನು ಗೆಲ್ಲುವ ಸಾಮರ್ಥ್ಯವುಳ್ಳವನು ಯೋಗಿಯಾಗಬೇಕೆಂದು ಪುಲಿಗೆರೆ ಕವಿಸೋಮನು ಬಯಸುತ್ತಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 10. | ಶಿಲ್ಪಿ ಧರ್ಮಪದನು ಕೊನಾರ್ಕ್‌ಗೆ ಏಕೆ ಬಂದನು ?<br>***ಉತ್ತರ :***<br>ಶಿಲ್ಪಿ ಧರ್ಮಪದನು ಕೊನಾರ್ಕ್ ದೇವಾಲಯದ ಮಹಾದ್ವಾರಕ್ಕೆ ಕಲಶವನ್ನು ಕೂರಿಸಲು ಬಂದನು. | |
| | **ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸುವಿಕೆ :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) | $14 \times 2 = 28$ |
| 11. | ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುವುದು ಯಾವಾಗ ?<br>***ಉತ್ತರ :***<br>ಹಿಂದಿನ ಕರ್ನಾಟಕದ ಜನರು ತಮ್ಮ ಅನನ್ಯವಾದ ಗುಣದಿಂದ ತಮ್ಮ ದೇಶವನ್ನು ದೊಡ್ಡದೆನಿಸಿದರು. ಅಂಥ ದೇಶವನ್ನು ಪಿತ್ರಾರ್ಜಿತವಾಗಿ ಪಡೆದಿರುವ ನಾವು ಅವರ ದೊಡ್ಡ ಗುಣಗಳನ್ನು ಬೆಳೆಸಿಕೊಂಡಾಗ ಮಾತ್ರ ಕರ್ನಾಟಕದ ಪ್ರಜೆಗಳೆಂಬ ಹೆಸರಿಗೆ ನಾವು ಪಾತ್ರರಾಗುತ್ತೇವೆ. | |
| 12. | ಅನಿಲ್ ಕುಂಬ್ಳೆಯವರ ಬಾಲ್ಯ ಜೀವನವನ್ನು ಕುರಿತು ಬರೆಯಿರಿ.<br>***ಉತ್ತರ :***<br>ಅನಿಲ್ ಕುಂಬ್ಳೆಯವರು 1970 ರ ಅಕ್ಟೋಬರ್ 17 ರಂದು ಬೆಂಗಳೂರಿನಲ್ಲಿ ಶ್ರೀ ಕೆ.ಎಸ್. ಕೃಷ್ಣಸ್ವಾಮಿ ಮತ್ತು ಶ್ರೀಮತಿ ಸರೋಜ ದಂಪತಿಗಳ ಮಗನಾಗಿ ಜನಿಸಿದರು. ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಬೆಂಗಳೂರಿನ ಹೋಲಿ ಸೇಂಟ್ ಪ್ರೌಢಶಾಲೆಯಲ್ಲಿ, ಪ್ರೌಢ ಶಿಕ್ಷಣವನ್ನು ಬೆಂಗಳೂರಿನ ನ್ಯಾಷನಲ್ ಪ್ರೌಢ ಶಾಲೆಯಲ್ಲಿ ಪೂರೈಸಿದರು. ತಮ್ಮ ಕ್ರಿಕೆಟ್ ಆಟವನ್ನು ಬಂಗಳೂರಿನ ಬೀದಿಯಲ್ಲಿ ಆರಂಭಿಸಿ, ತಮ್ಮ ಹದಿಮೂರನೇ ವಯಸ್ಸಿನಲ್ಲಿ ಬೆಂಗಳೂರಿನ ಯಂಗ್ ಕ್ರಿಕೆಟರ್ಸ್ ಸಂಸ್ಥೆಯನ್ನು ಸೇರಿದರು. | |
| 13. | ಐ.ಪಿ.ಎಲ್. ಕ್ರೀಡಾಸ್ಪರ್ಧೆಯಲ್ಲಿ ಕುಂಬ್ಳೆಯವರು ವಹಿಸಿದ್ದ ಪಾತ್ರವೇನು ?<br>***ಉತ್ತರ :***<br>ಕುಂಬ್ಳೆಯವರು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚುನಾಯಿತ ಅಧ್ಯಕ್ಷರಾಗಿದ್ದುದಲ್ಲದೆ. ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡದ ಪ್ರಮುಖ ಆಟಗಾರರಾಗಿದ್ದು, ಐ.ಪಿ.ಎಲ್. ಕ್ರೀಡಾ ಸ್ಪರ್ಧೆಯ ಎರಡನೇ ವರ್ಷವೇ ಸ್ವತಃ ಅತಿ ಹೆಚ್ಚು ವಿಕೆಟ್ ಪಡೆದ ಎರಡನೇ ಬೌಲರಾದ ಹಿರಿಮೆ, ಮೂರನೇಯ ವರ್ಷ ತಂಡವನ್ನು ದ್ವಿತೀಯ ಸ್ಥಾನಕ್ಕೆ ಕೊಂಡೊಯ್ದ ಕೀರ್ತಿಯೂ ಇವರದಾಗಿತ್ತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 14. | ರಾಣಿ ಅಬ್ಬಕ್ಕ ಪೋರ್ಚುಗೀಸರನ್ನು ಸೋಲಿಸಲು ಕೈಗೊಂಡ ಕ್ರಮಗಳೇನು ?<br>***ಉತ್ತರ :***<br>ಪೋರ್ಚುಗೀಸರು ಉಲ್ಲಾಳದ ಕರಾವಳಿಯಲ್ಲಿ ಲಂಗರು ಹಾಕಿದ್ದಾಗ ರಾಣಿ ಅಬ್ಬಕ್ಕನ ಮೊಗೇರು ಎಂಬ ಮೀನುಗಾರ ಸಾಹಸಿ ಸೈನಿಕರು ಕರಾಳ ರಾತ್ರಿಯಲ್ಲಿ ಸದ್ದು ಗದ್ದಲವಿಲ್ಲದೆ ನೂರಾರು ದೋಣಿಯಲ್ಲಿ ಹೋಗಿ ಸಾವಿರಾರು ತೆಂಗಿನ ಗರಿಗಳ ದೀವಟಿಗೆಗಳನ್ನು ಅವರ ನೌಕೆಯ ಮೇಲೆಸೆದ, ಉರಿಯುವ ನೌಕೆಗಳಿಂದ ದಿಕ್ಕೆಟ್ಟ ಪೋರ್ಚುಗೀಸರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರುವಂತೆ ಮತ್ತು ತನ್ನ ಖಡ್ಗ, ಈಟಿಗಳಿಂದ ಬಲಿಯಾಗುವಂತೆ ಕ್ರಮಕೈಗೊಳ್ಳುತ್ತಾಳೆ. | |
| 15. | ಮೊಗಲರು ಪ್ರಾಣಭೀತಿಯಿಂದ ಪಲಾಯನಗೈಯಲು ಕೆಳದಿ ರಾಣಿ ಚೆನ್ನಮ್ಮ ಕೈಗೊಂಡ ಉಪಾಯಗಳೇನು ?<br>***ಉತ್ತರ :***<br>ಕೆಳದಿಯ ಚೆನ್ನಮ್ಮ ಶಿವಾಜಿಯ ಮಗ ರಾಜಾರಾಯನಿಗೆ ಆಶ್ರಯ ನೀಡಿದ್ದಾಳೆಂದು ಔರಂಗಜೇಬನು ಭಾರಿ ಸೈನ್ಯದೊಂದಿಗೆ ತನ್ನ ಮಗ ಅಜಮತಾರನನ್ನು ಕಳುಹಿಸುತ್ತಾನೆ. ಚಾಣಾಕ್ಷಳಾದ ಚೆನ್ನಮ್ಮ ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿ ಸುತ್ತಲಿನ ಬೆಟ್ಟ, ಕಣಿವೆ, ಇಕ್ಕಟ್ಟುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನಿಕರನ್ನು ನಿಲ್ಲಿಸಿ ಮೊಗಲ್ ಸೈನಿಕರಿಗೆ ಅನ್ನ, ನೀರು ಸಿಗದಂತೆ ಮಾಡುತ್ತಾಳೆ. ಅವರು ದಟ್ಟವಾದ ಕಾಡುಗಳಲ್ಲಿ ಸಂದುಗೊಂದುಗಳಲ್ಲಿ ಚಲಿಸಲಾಗದೆ ಮಲೆನಾಡಿನ ಮಳೆಯಿಂದ ತತ್ತರಿಸಿ ಪ್ರಾಣಭೀತಿಯಿಂದ ಪಲಾಯಿನ ಗೈಯುವಂತೆ ಉಪಾಯ ಮಾಡುತ್ತಾಳೆ. | |
| 16. | ಕೋಗಿಲೆಯ ಗಾನದ ತರಂಗಗಳ ಪರಿಣಾಮವನ್ನು ಚೆನ್ನವೀರ ಕಣವಿಯವರು ಹೇಗೆ ವರ್ಣಿಸಿದ್ದಾರೆ ?<br>***ಉತ್ತರ :***<br>ಕೋಗಿಲೆಯ ಇಂಪಾದ ಗಾನವು ಮನುಷ್ಯರ ಮನದಾಳದ ಭಾವನೆಗಳು ಮೌನತಾಳುವಂತೆ ಮಾಡುತ್ತದೆ. ಮನುಜಲೋಕವನ್ನೇ ಸ್ವರ್ಗವನ್ನಾಗಿಸಿ ಪ್ರತಿಯೊಬ್ಬರ ಎದೆಯಲ್ಲಿ ನಾದವು ಮಿಡಿಯುವಂತೆ ಮಾಡುವುದಲ್ಲದೆ ಆನಂದ ರಸದ ಕಡಲಲ್ಲಿ ತೇಲಾಡುವಂತೆ ಮಾಡುತ್ತದೆ. ನಾದದ ಅಲೆಗಳು ಮನುಷ್ಯರ ಮನದಲ್ಲಿ ಹೊಯ್ದಾಡುವಂತೆ ಮಾಡಿ ಉಲ್ಲಾಸವನ್ನು ನೀಡುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 17. | ಕವಿ ಚೆನ್ನವೀರ ಕಣವಿಯವರು ಕೋಗಿಲೆಯು ನಮಗೆ ಅಮೃತವನ್ನು ಹೇಗೆ ನೀಡಬೇಕೆಂದು ತಿಳಿಸಿದ್ದಾರೆ ?<br><br>*ಉತ್ತರ :*<br><br>ಕೋಗಿಲೆಯು ತನ್ನ ಗಾನದಿಂದ ಪ್ರತಿಯೊಬ್ಬ ಮನುಷ್ಯರ ಮನದಲ್ಲಿ ರಸದ ಕಡಲನ್ನೇ ಸೃಷ್ಟಿಸುತ್ತದೆ. ಅವನನ್ನು ತನ್ನ ಇಂಪಾದ ಸ್ವರದಿಂದ ತಣಿಯುವಂತೆ ಮಾಡಬೇಕು. ಆನಂದದ ಚಿಲುಮೆ ಪುಟಿಯುತ್ತಿರಬೇಕು ಹಾಗೂ ಸಂತೋಷದ ಹೊಳೆಯನ್ನು ಪ್ರೀತಿಯ ಗಾನಾಮೃತವನ್ನು ನೀಡಬೇಕೆಂದು ಕವಿ ಚೆನ್ನವೀರ ಕಣವಿಯವರು ತಿಳಿಸಿದ್ದಾರೆ. | |
| 18. | ಮೋಡಗಳನ್ನು ಕಂಡಾಗ ರೈತರಿಗಾಗುವ ಸಂತೋಷವನ್ನು ಜನಪದರು ಹೇಗೆ ವರ್ಣಿಸಿದ್ದಾರೆ ?<br><br>*ಉತ್ತರ :*<br><br>ಜನಪದರು ಮುಂಗಾರಿನ ಮಳೆಗಾಲದ ಸಂದರ್ಭದಲ್ಲಿ ಪೂರ್ವದಿಕ್ಕಿನಲ್ಲಿ ಕಂಡುಬಂದ ಕಾರ್ಮೋಡಗಳನ್ನು ಕಂಡು ಸಂತೋಷಪಡುವರು. ಅಲ್ಲದೆ ಅದು ಮುಂಗಾರಿನ ಮಳೆಯ ಸೂಚಕವೆಂದೂ. ಅದರ ಅಂದ ಚೆಂದವನ್ನು ಗೋಡೆಗೆ ಕಪ್ಪುಬಣ್ಣವನ್ನು ಬಳಿದಂತೆ ಕಾಣುವುದಲ್ಲದೆ. ಆ ಮೋಡಗಳು ಮಳೆ ಸುರಿಸುವಾಗ ಆರ್ಭಟವನ್ನು ಮಾಡುತ್ತಾ ಹೆಚ್ಚು ಮಳೆಯು ಸುರಿಯುವುದೆಂಬ ಆಸೆಯನ್ನು ವ್ಯಕ್ತಪಡಿಸುತ್ತಾ ಸಂತೋಷವನ್ನು ಕಾಣುತ್ತಾರೆ. | |
| 19. | ಸ್ವಾತಿ ಮಳೆಯ ಮಹತ್ವವನ್ನು ಜನಪದರು ವರ್ಣಿಸಿರುವ ಬಗೆಯನ್ನು ತಿಳಿಸಿ.<br><br>*ಉತ್ತರ :*<br><br>ಜನಪದರು ಸ್ವಾತಿಮಳೆಯ ಬಗ್ಗೆ ವರ್ಣಿಸುತ್ತಾ ಸಾವಿರಾರು ಕೆರೆಗಳು ತುಂಬಿ ಹೋಗುವುದರಿಂದ ಉತ್ತಮ ಫಸಲನ್ನು ನಿರೀಕ್ಷಿಸಿ ಸಮೃದ್ಧಿಯನ್ನು ಕಾಣಬಹುದೆಂದೂ, ಹಾಗೆಯೇ ಮೀನುಗಳು ಕುಣಿಗಲ್ ಕೆರೆಯಲ್ಲಿ ಹೆಚ್ಚಾಗಿ ಬೆಸ್ತರ ಗಾಳಕ್ಕೆ ಸಿಲುಕಿ ನೇತಾಡುತ್ತವೆಂದು ಇದರಿಂದ ಎಲ್ಲರೂ ಸಮೃದ್ಧ, ಸುಖಕರ ಜೀವನವನ್ನು ನಡೆಸಬಹುದೆಂದು ಅಭಿಪ್ರಾಯವನ್ನು ವ್ಯಕ್ತಪಡಿಸುವರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 20. | ವಿದ್ಯುತ್‌ತಂತಿಗಳು ತಲೆಯ ಹತ್ತಿರದಲ್ಲೇ ಹಾದು ಹೋದಾಗ ಈರಪ್ಪ ಎಂ. ಕಂಬಳಿಯವರಿಗಾದ ಅನುಭವೇನು ?<br><br>***ಉತ್ತರ :***<br><br>ವಿದ್ಯುತ್ ತಂತಿಗಳು ತಲೆಯ ಹತ್ತಿರದಲ್ಲೇ ಹಾದು ಹೋದಾಗ ಮೈಮರೆತು ಕುಳಿತ್ತಿದ್ದ ಈರಪ್ಪ ಎಂ. ಕಂಬಳಿಯವರಿಗೆ ಸಾವೇ ಭುಜವನ್ನು ಸವರಿಕೊಂಡು ಹೋದಂತೆ ಹಾಗೂ ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಹ ಅನುಭವವಾಯಿತು.<br>**ಸಂದರ್ಭಸಹಿತ ವಿವರಣೆ :** | |
| | ಕೃತಿ–ಕರ್ತೃ | $4 \times 3 = 12$<br>1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 21. | "ನಾಳೆ ಕ್ಲಾಸೇನೂ ನಿಲ್ಲುವುದಿಲ್ಲ"<br><br>***ಉತ್ತರ :***<br><br>ಈ ಪ್ರಸುತ ವಾಕ್ಯವನ್ನು 'ಹಾಸ್ಯಜೀವಿ ನಾ. ಕಸ್ತೂರಿ' ಎಂಬ ಗದ್ಯಭಾಗದಿಂದ ಆರಿಸಿದೆ. ಈ ಪಾಠಭಾಗವನ್ನು ಅ.ರಾ. ಮಿತ್ರರವರ 'ಸ್ಮರಣೀಯರು' ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.<br><br>ನಾ. ಕಸ್ತೂರಿಯವರು ಮಹಾರಾಜ ಕಾಲೇಜಿನಲ್ಲಿದ್ದಾಗ ಅವರ ಅಂತಿಮ ಬಿ.ಎ. ತರಗತಿಯ ನೋಟ್ಸ್ ಪುಸ್ತಕವನ್ನು ಯಾರೋ ಹುಡುಗನೊಬ್ಬ ಲಪಟಾಯಿಸಿದಾಗ, ಇವರು ಸಂಜೆ ಕಳುವಾಗಿರುವ ವಿಚಾರವನ್ನು ಇತರೆ ಅಧ್ಯಾಪಕರಿಗೆ ಹೇಳುತ್ತಾ ನಾಳೆ ಕ್ಲಾಸೇನೂ ನಿಲ್ಲುವುದಿಲ್ಲ. ಏಕೆಂದರೆ ಅದೇ ವಿದ್ಯಾರ್ಥಿ ನಾಳೆ ಬೆಳಿಗ್ಗೆ ಹತ್ತು ಗಂಟೆಗೆ ನನ್ನ ಟೇಬಲ್ ಮೇಲೆ ಎಸೆದು ಹೋಗಿರುತ್ತಾನೆಂದಾಗ ಅಚ್ಚರಿಗೊಂಡ ಅಧ್ಯಾಪಕರಿಗೆ ಅದರ ಹಿಂದಿನ ವಿಚಾರ ತಿಳಿಯುತ್ತದೆ. ಏಕೆಂದರೆ ಅದು ಮಲೆಯಾಳಿ ಲಿಪಿಯಲ್ಲಿತ್ತು.<br><br>ಈ ವಾಕ್ಯದಲ್ಲಿ ಕಸ್ತೂರಿಯವರು ವಿದ್ವತ್‌ವಲಯದಲ್ಲಿ ಜನಪ್ರಿಯರಾಗಿದ್ದುದು ಹಾಗೂ ಅವರ ಹಾಸ್ಯಪ್ರಜ್ಞೆ ಎದ್ದು ತೋರುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 22. | "ಹೆಂಡಿರಾದರೆ ಮಕ್ಕಳ ಚಿಂತೆ"<br>***ಉತ್ತರ :***<br>ಈ ಪ್ರಸುತ ವಾಕ್ಯವನ್ನು 'ವಚನ' ಪದ್ಯದಿಂದ ಆರಿಸಿಕೊಳ್ಳಲಾಗಿದೆ. ಈ ಪದ್ಯವನ್ನು ಅಂಬಿಗರ ಚೌಡಯ್ಯನವರ ವಿರಚಿತ 'ಗಮಕ ಗಂಗೋತ್ರಿ' ಕೃತಿಯಿಂದ ಆಯ್ದುಕೊಳ್ಳಲಾಗಿದೆ.<br>ವಚನಕಾರರು ಮನುಷ್ಯರು ತನ್ನ ಲೌಕಿಕ ಬದುಕಿನಲ್ಲಿ ಸದಾ ಚಿಂತಿಸುತ್ತಿರುತ್ತಾನೆ. ಬಡತನದಲ್ಲಿದ್ದಾಗ ಉಣ್ಣುವ, ಉಡುವ, ಹಣಕೂಡಿಡುವ ಬಗ್ಗೆ, ಮದುವೆ, ಹೆಂಡತಿ ಬಗ್ಗೆ ಚಿಂತಿಸುತ್ತಾ ಹೆಂಡತಿ ಬಂದ ಮೇಲೆ ಮಕ್ಕಳ ಚಿಂತನೆಯನ್ನು ಮಾಡುತ್ತಾ ದೇವರ ಚಿಂತನೆಯಲ್ಲಿ ತಲ್ಲೀನನಾಗಿರುವುದಿಲ್ಲವೆಂದು ಮಾರ್ಮಿಕವಾಗಿ ಹೇಳಿದ್ದಾರೆ.<br>ಈ ವಾಕ್ಯದಲ್ಲಿ ಲೌಕಿಕ ಸಾಧನೆಯೊಂದೇ ಸಾಧನೆ ಎಂದು ತಿಳಿಯುವ ಬದಲು ಅಲೌಕಿಕತೆಯ ಬಗ್ಗೆ ಭಕ್ತಿ ಮೂಡಿಸಿಕೊಳ್ಳಬೇಕೆಂದು ಗ್ರಹೀತವಾಗುತ್ತದೆ. | |
| 23. | **ಪದ್ಯಭಾಗ ಪೂರ್ಣ ಮಾಡುವುದು :**<br>(ತಪ್ಪಿಲದೆ ಬರೆದ ಪೂರ್ಣ ಸಾಲುಗಳಿಗೆ ಒಟ್ಟು ಮೂರು ಅಂಕಗಳು)<br>ನಾವು ನೀವು ..................................................<br>............................................................<br>............................................................<br>..................................................... ಇಂದೆ.<br>***ಅಥವಾ***<br>ಕರ್ನಾಟಕ ...................................................<br>............................................................<br>............................................................<br>..................................................... ಒಂದೆ.<br>***ಉತ್ತರ :***<br>ನಾವು ನೀವು ಅವರು ಇವರು<br>ಒಂದೆ ಒಂದೆ ಒಂದೆ<br>ಭೂಮಿ ತಾಯ ಕುಡಿಗಳೆಂದು<br>ಪಣವ ತೊಡಿರಿ ಇಂದೆ.<br>**ಅಥವಾ**<br>ಕರ್ನಾಟಕ ವಂಗ ಆಂಧ್ರ<br>ಭಾರತೀಯರೊಂದೆ.<br>ಪೂರ್ವೋತ್ತರ ಪಡು ತೆಂಕಣ<br>ಗಾಳಿ ಮುಗಿಲು ಒಂದೆ. | 1 × 3 = 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಕವಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ವಿವರಿಸಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 24 | ಗೊರೂರು ರಾಮಸ್ವಾಮಿ ಅಯ್ಯಂಗಾರ್ | |
| | ***ಉತ್ತರ :*** | |
| | ಇವರು ೧೯೦೪ ರಲ್ಲಿ ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು. ಇವರು ನಮ್ಮ ಊರಿನ ರಸಿಕರು, ಗರುಡಗಂಬದ ದಾಸಯ್ಯ, ಹೇಮಾವತಿ, ಮೆರವಣಿಗೆ, ಅಮೆರಿಕಾದಲ್ಲಿ ಗೊರೂರು, ಬೂತಯ್ಯನ ಮಗ ಅಯ್ಯು, ಹಳ್ಳಿಯ ಹಾಡು ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. | |
| 25. | ಬಿ.ಆರ್. ಲಕ್ಷ್ಮಣರಾವ್ | |
| | ***ಉತ್ತರ :*** | |
| | ಇವರು ೧೯೪೬ ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯಲ್ಲಿ ಜನಿಸಿದರು. ಇವರು ಕ್ಯಾಮೆರಾ ಕಣ್ಣು, ಗೋಪಿ ಮತ್ತು ಗಾಂಡಲೀನ, ಶಾಂಗ್ರಿ–ಲಾ, ಟುವಟಾರ, ಭಾರತ ಬಿಂದು ರಶ್ಮಿ, ಸುಬ್ಬಾಭಟ್ಟರ ಮಗಳೇ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. | |
| | **ಎಂಟು–ಹತ್ತು ವಾಕ್ಯಗಳಿಗೆ ಮೀರದಂತೆ ಉತ್ತರಿಸುವುದು :** | 2 × 4 = 8 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 26. | ರಾಮಸಿಂಗ್ ಗುಂಡೇಟಿಗೆ ಬಲಿಯಾದಾಗ ಕುಲಕರ್ಣಿ ಹಾಗೂ ಸೋಮಣ್ಣರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ. | |
| | ***ಅಥವಾ*** | |
| | ಧ್ವಜರಕ್ಷಣೆ ನಾಟಕದಲ್ಲಿ ಬರುವ ರಾಮಸಿಂಗ್‌ನ ಪಾತ್ರವನ್ನು ಕುರಿತು ನಿಮ್ಮ ಮಾತುಗಳಲ್ಲಿ ವಿವರಿಸಿ. | |
| | ***ಉತ್ತರ :*** | |
| | ಅಧಿಕಾರಿಯಾಗಿದ್ದ ಕುಲಕರ್ಣಿಯು ಆದೇಶವನ್ನು ಮೀರಿದ ರಾಮಸಿಂಗ್‌ನಿಗೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಗುಂಡಿಕ್ಕಿ ಕೊಂದಾಗ ಸೋಮಣ್ಣ ಎನ್ನುವ ಸ್ವಾತಂತ್ರ್ಯ ಹೋರಾಟಗಾರನು ಕುಲಕರ್ಣಿಯವರನ್ನು ಏನಿದು ಗದ್ದಲ ? ಈ ಬಾಲಕನ ಮೇಲೆ ಗುಂಡು ಹಾರಿಸಿರುವ ನಿಮಗೆ ಕೈಗಳಾದರೂ ಹೇಗೆ ಮೇಲೆತ್ತಿದ್ದವು. ನೀವು ಸೈತಾನರೇ ? ಎನ್ನುವನು. ಆಗ ಕುಲಕರ್ಣಿ ಈ ಬಾಲಕನು ಉದ್ಧಟನಾಗಿ ವರ್ತಿಸಿದನು. ಅದಕ್ಕಾಗಿ ಈ ಗತಿ ಬಂದಿದೆ. ಈತ ಬಹಳ ಹಠಮಾರಿ. ಎಷ್ಟು ಪರಿ ಹೇಳಿದರೂ ಕೇಳದೆ ಆಜ್ಞೆ ಮೀರಿದನು ಎನ್ನುತ್ತಾನೆ. | |
| | ಸೋಮಣ್ಣನು ಅವನಿಗ ನೀವು ಸ್ವಚ್ಛತೆಯ ಪಾಠ ಕಲಿಸಿರಿ, ಅಜ್ಞಾನ ದೂರ ಮಾಡಿ, ಜ್ಞಾನ ಜ್ಯೋತಿ ಬೆಳಗಿರಿ ಆಗ ನಿಮ್ಮನ್ನು ಪೂಜಿಸುವೆವು. ಆದರೆ ನೀವು ಪಾರತಂತ್ರ್ಯದಲ್ಲಿದ್ದು ಹೀಗೆ ಕಿರುಕುಳ ನೀಡುವುದು ನಿಮ್ಮ ದಾನವದರ್ಪ, ದಾಸ್ಯದ ಸಂಕೇತ ಎನ್ನುತ್ತಾನೆ. | |
| | ಅದಕ್ಕೆ ಕುಲಕರ್ಣಿ ಹಿರಿಯರಾದ ನೀವು ಈ ರೀತಿ ಮಾತನ್ನಾಡಿ ಅರಿಯದ ಬಾಲಕರನ್ನು ಅಡ್ಡದಾರಿಗೆ ಎಳೆದು ಅವರ ಬದುಕನ್ನು ಹಾಳು ಮಾಡಬೇಡಿರಿ. ನಾನು ಸರ್ಕಾರಿ ಸೇವಕ, ಕರ್ತವ್ಯ ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತೇನೆಂದನು. | |
| | ಆಗ ಸೋಮಣ್ಣ ದೇಶದ ಕಂದಮ್ಮರನ್ನು ಕೊಂದು ಅವರ ರಕ್ತದ ಮಡುವಿನಲ್ಲಿ ಮೆರೆದಾಡುವುದೇ ನಿಮ್ಮ ಕರ್ತ್ಯವ್ಯ ನಿಷ್ಠೆಯೇ ? ಅದಕ್ಕೆ ದಿಕ್ಕಾರವಿರಲಿ ಎಂದು ತನ್ನ ಕ್ರೋಧದ ನುಡಿಯನ್ನು ವ್ಯಕ್ತಪಡಿಸುತ್ತಾನೆ. | |
| | ಇವರಿಬ್ಬರ ನಡುವೆ ನಡೆದ ಸಂಭಾಷಣೆಗೆ ಸಂಬಂಧಿಸಿದಂತೆ ಇತರ ವಿಚಾರಗಳನ್ನು ಬರೆದರೂ ಅಂಕಗಳನ್ನು ನೀಡುವುದು. | |
| | **ಅಥವಾ** | |
| | ರಾಮಸಿಂಗ್ ಮೋಹನಪುರದ ಉತ್ಸಾಹಿ ತರುಣ. ಈತ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಲು ಸಿದ್ಧನಾದಾಗ ಅವನ ತಾಯಿ ಹಾರೈಸಿ ಅವನನ್ನು ಕಳುಹಿಸುತ್ತಾಳೆ. ರಾಮಸಿಂಗ್ ಸಭೆ ಸೇರಿಸಿದ್ದನ್ನು ಸಿಪಾಯಿಗಳು ವಿರೋಧಿಸುತ್ತಾರೆ. ಛಲಬಿಡದ ಆತನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಅವರನ್ನು ಬ್ರಿಟಿಷರ ಗುಲಾಮರೆಂದು, ಅವರ ಅಧಿಕಾರ ಇಲ್ಲಿ ನಡೆಯುವುದಿಲ್ಲವೆಂದು ಹೇಳಿದಾಗ ಕುಲಕರ್ಣಿಯು ಕೋಪಗೊಂಡು ನೀನು ಹುಡುಗ ಬಾಯಿಮುಚ್ಚು ಎನ್ನುತ್ತಾನೆ. ಆದರೆ ರಾಮಸಿಂಗ್ ಗಾಂಧೀಜಿಯವರ ಮಂತ್ರವಾದ 'ಮಾಡು ಇಲ್ಲವೇ ಮಡಿ' ಎಂಬಂತ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಸಾರಲು ತಾನು ಬಂದಿರುವುದಾಗಿಯೂ, ಸಭೆಯನ್ನು ತಾನು ಸೇರಿಸಿಯೇ ಸೇರಿಸುತ್ತೇನೆಂದು ಪಣತೊಟ್ಟು 'ವಂದೇ ಮಾತರಂ' ಘೋಷಣೆಯನ್ನು ಕೂಗಿದಾಗ ಕುಲಕರ್ಣಿ ಅವನನ್ನು ತಡೆಯಲು ಪ್ರಯತ್ನಿಸಿ ಗುಂಡೇಟಿನಿಂದ ಅವನನ್ನು ಕೊಲ್ಲುತ್ತಾನೆ. ಇದು ಆತ ನಡೆಸಿದ ಸ್ವಾತಂತ್ರ್ಯ ಹೋರಾಟಕ್ಕೆ ಸಿಕ್ಕ ಪ್ರತಿಫಲವೆನಿಸುತ್ತದೆ. ಅಪ್ರತಿಮ ದೇಶಭಕ್ತನಾದ ರಾಮಸಿಂಗ್ ರಾಷ್ಟ್ರಸೇವೆಗಿಂತ ಮಿಗಿಲಾದದ್ದು ಯಾವುದೂ ಇಲ್ಲ ಎಂಬುದನ್ನು ಸಾಧಿಸಿ ತೋರಿಸಿರುವುದು ಅವನ ಪಾತ್ರದ ಮೂಲಕ ವ್ಯಕ್ತವಾಗುತ್ತದೆ. | |
| 27. | ಪುರಂದರದಾಸರು ತಿಳಿಸಿರುವ ಮನಸ್ಸನ್ನು ಶೋಧಿಸುವ ವಿಧಾನಗಳನ್ನು ತಿಳಿಸಿ.<br><br>***ಅಥವಾ***<br><br>'ಮುಕ್ತಿ ನಿನಗೆ ಕೇವಲ ಒಂದು ಗೇಣು ದೂರ' ಎಂಬುದನ್ನು ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ವರ್ಣಿಸಿರುವ ಬಗೆಯನ್ನು ಕುರಿತು ವಿವರಿಸಿ.<br><br>***ಉತ್ತರ :***<br><br>ಪುರಂದರದಾಸರು ತಮ್ಮ ದಾಸರ ಪದಗಳಲ್ಲಿ ನಾವು ಪ್ರತಿನಿತ್ಯ ಕೈಗೊಳ್ಳುವ ಕಾರ್ಯಗಳಲ್ಲಿ ಒಳ್ಳೆಯದು, ಕೆಟ್ಟದ್ದು ಯಾವುದೆಂದು ಬೇರ್ಪಡಿಸಿಕೊಂಡು, ಪಾಪ, ಪುಣ್ಯಗಳನ್ನು ಲೆಕ್ಕಹಾಕಿಕೊಂಡು ಉತ್ತಮ ಕಾರ್ಯಗಳನ್ನು ಕೈಗೊಳ್ಳಬೇಕು. ಕೆಟ್ಟ ನಡತೆಗಳಿಗೆ ಕಾರಣಗಳೇನು ? ಎಂಬುದನ್ನು ತಿಳಿದು ಅವುಗಳನ್ನು ಬೇರುಸಹಿತ ಕಿತ್ತೊಗೆದು, ಅಂದರೆ ನಮ್ಮಲ್ಲಿರುವ ಅರಿಷಡ್ವರ್ಗ ಭಾವನೆಗಳನ್ನು ಕಿತ್ತೊಗೆದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸದ್ಭಾವನೆಗಳನ್ನು ಪರಿಶುದ್ಧವಾದ ನಡೆವಳಿಕೆಗಳನ್ನು ರೂಢಿಸಿಕೊಂಡು ಸನ್ಮಾರ್ಗದಲ್ಲಿ ನಡೆಯುತ್ತಾ ನಾವು ಪರಬ್ರಹ್ಮಮೂರ್ತಿಯ ಪಾದಕಮಲಗಳನ್ನು ನೆನೆಯುತ್ತಾ ಮನಸ್ಸನ್ನು ಶುದ್ಧವಾಗಿಸಿಕೊಳ್ಳಬೇಕೆಂದು ಪುರಂದರದಾಸರು ತಿಳಿಸಿದ್ದಾರೆ. | |
| | **ಅಥವಾ** | |
| | ಪುರಂದರದಾಸರು ಸನ್ಮಾರ್ಗದಲ್ಲಿ ನಡೆಯಲು ಕರೆ ನೀಡುತ್ತಾ ನಮ್ಮಲ್ಲಿರುವ ಕೆಟ್ಟ ಭಾವನೆಗಳನ್ನು ದೂರಗೈಯ್ಯಬೇಕಾದರೆ ಮೊದಲು ನಾವು ನಮ್ಮ ಕಾಮನೆಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಅಂದರೆ ಇಂದ್ರಿಯ ನಿಗ್ರಹವನ್ನು ಹೊಂದಿರಬೇಕು. ಹಾಗೆಯೇ ಮನಸ್ಸಿನಲ್ಲುಂಟಾಗುವ ಅರಿಷಡ್ವರ್ಗ, ಕಾಮನೆಗಳನ್ನು ಹಿಡಿತದಲ್ಲಿಟ್ಟು, ಮನಸ್ಸನ್ನು ನಮ್ಮ ಹತೋಟಿಯಲ್ಲಿಟ್ಟುಕೊಂಡರೆ ಜಗತ್‌ರಕ್ಷಕ ಪರಮಾತ್ಮನನ್ನು ಕಾಣುವ ಪ್ರಯತ್ನ ಮಾಡಿದಾಗ ನಾವು ಮುಕ್ತಿಯನ್ನು ಪಡೆಯಲು ಮಾರ್ಗವನ್ನು ಕಂಡುಕೊಳ್ಳಬಹುದು. ಅದು ತೀರಾ ಹತ್ತಿರವೂ ಆಗುವುದೆಂದು ದಾಸರ ಪದಗಳಲ್ಲಿ ಪುರಂದರದಾಸರು ತಿಳಿಸಿದ್ದಾರೆ. | |
| | **ವಿಭಾಗ – 'ಬಿ'** | |
| | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 12 × 1 = 12 |
| 28. | ಕನ್ನಡ ವರ್ಣಮಾಲೆಯಲ್ಲಿರುವ ಅವರ್ಗೀಯ ವ್ಯಂಜನಗಳು<br>***ಉತ್ತರ :*** (ಡಿ) 9 | |
| 29. | 'ಹನ್ನೆರಡು' ಎಂಬ ಪದವು ಈ ನಾಮವಾಚಕಕ್ಕೆ ಸೇರಿದೆ<br>***ಉತ್ತರ :*** (ಸಿ) ಸಂಖ್ಯಾವಾಚಕ | |
| 30. | 'ಜಾನ್ ಊಟವನ್ನು ಮಾಡಿದನು' — ಈ ವಾಕ್ಯದಲ್ಲಿರುವ ಕ್ರಿಯಾಪದದ ಕಾಲ ರೂಪ<br>***ಉತ್ತರ :*** (ಬಿ) ಭೂತಕಾಲ | |
| 31. | 'ಕಪ್ಪಕಾಣಿಕೆ' — ಈ ಪದದ ವ್ಯಾಕರಣಾಂಶ<br>***ಉತ್ತರ :*** (ಸಿ) ಜೋಡುನುಡಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
| --- | --- | --- |
| 32. | 'ಜನರೊಪ್ಪದೆ' — ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>***ಉತ್ತರ :*** (ಎ) ಲೋಪ | |
| 33. | 'ಮೂಡಣ' — ಪದದ ಸಮಾನಾರ್ಥಕ ಪದ<br>***ಉತ್ತರ :*** (ಎ) ಪೂರ್ವ | |
| 34. | 'ವೈಶಾಖ' — ಪದದ ತದ್ಭವ ರೂಪ<br>***ಉತ್ತರ :*** (ಸಿ) ಬೇಸಗೆ | |
| 35. | 'ಕಾಡುಗಳು ಬೆಂಕಿ ಹೊತ್ತಿಕೊಂಡಾಗ ಧಗಧಗನೆ ಉರಿದುಹೋದವು.' — ಈ ವಾಕ್ಯದಲ್ಲಿರುವ ಅನುಕರಣಾವ್ಯಯ ಪದ<br>***ಉತ್ತರ :*** (ಬಿ) ಧಗಧಗನೆ | |
| 36. | 'ಅಕ್ಷರವೆಂಬುದು ಅಲ್ಲಾದೀನನ ಅದ್ಭುತ ಮಾಯಾದೀಪ' — ವಾಕ್ಯದಲ್ಲಿರುವ ಅಲಂಕಾರ<br>***ಉತ್ತರ :*** (ಬಿ) ರೂಪಕಾಲಂಕಾರ | |
| 37. | 'ಕಸಕಡ್ಡಿ' — ಪದವು ಈ ಸಮಾಸಕ್ಕೆ ಸೇರಿದೆ<br>***ಉತ್ತರ :*** (ಸಿ) ದ್ವಂದ್ವ ಸಮಾಸ | |
| 38. | ಬರವಣಿಗೆಯಲ್ಲಿ ಪಾರಿಭಾಷಿಕ / ಪ್ರಧಾನ / ವಿಶಿಷ್ಟ ಪದಗಳನ್ನು ಬಳಸುವಾಗ ಉಪಯೋಗಿಸುವ ಲೇಖನ ಚಿಹ್ನೆ<br>***ಉತ್ತರ :*** (ಬಿ) ವಾಕ್ಯವೇಷ್ಟನ | |
| 39. | 'ಕಟ್ಟಡಕ್ಕೆ' — ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ<br>***ಉತ್ತರ :*** (ಡಿ) ಚತುರ್ಥೀ | |
| | **ವಿಭಾಗ – 'ಸಿ'**<br>**(ವಾಕ್ಯರಚನೆ ಹಾಗೂ ಬರೆವಣಿಗೆ ಕೌಶಲ)**<br>**ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :**<br>(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | $4 \times 1 = 4$ |
| | ಭಾಷೆಯು ಸಂವಹನ ಮಾಧ್ಯಮ. ಇದು ಮಾತು ಮತ್ತು ಬರೆಹದ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. ಮಾತಿನ ಸಾಂಕೇತಿಕ ರೂಪವೇ ಬರೆಹ. ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಬೇರೆ ಭಾಷೆಗಳಿಂದ ಪ್ರಭಾವಿತವಾಗಿದ್ದರೂ ತನ್ನ ಸ್ವಂತಿಕೆಯನ್ನು ಬಿಟ್ಟಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಭಾಷೆ ತನ್ನ ಸುತ್ತಲಿನವರೊಂದಿಗೆ ವ್ಯವಹರಿಸಲು ಮತ್ತು ವಿಚಾರ ವಿನಿಮಯ ಮಾಡಲು ಮನುಷ್ಯನಿಗೆ ಒಂದು ಅಮೂಲ್ಯ ಸಾಧನವಾಗಿದೆ. ಈ ಭಾಷೆಯ ಉಗಮ ಯಾವಾಗ ಮತ್ತು ಹೇಗಾಯಿತೆಂದು ಹೇಳುವುದು ಕಷ್ಟ. ಆದರೆ ಮನುಷ್ಯನು ತನ್ನ ಮೇಧಾಶಕ್ತಿಯಿಂದ ಭಾಷೆಯನ್ನು ಬಳಸುತ್ತಿರುವುದರಿಂದ ಈ ಜಂಗಮ ಜಗತ್ತಿನಲ್ಲಿ ಇತರೆ ಜೀವಿಗಳಿಗಿಂತ ಭಿನ್ನನಾಗಿದ್ದಾನೆ. | |
| 40. | ಭಾಷೆಯು ಅಭಿವ್ಯಕ್ತವಾಗುವ ರೂಪಗಳು ಯಾವುವು ?<br>***ಉತ್ತರ :***<br>ಭಾಷೆಯು ಮಾತು ಮತ್ತು ಬರೆಹದ ರೂಪದಲ್ಲಿ ಅಭಿವ್ಯಕ್ತಗೊಳ್ಳುತ್ತದೆ. | |
| 41. | ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಎಷ್ಟು ವರ್ಷಗಳ ಇತಿಹಾಸವಿದೆ ?<br>***ಉತ್ತರ :***<br>ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. | |
| 42. | ಭಾಷೆಯು ಮನುಷ್ಯನಿಗೆ ಹೇಗೆ ಅಮೂಲ್ಯವಾದ ಸಾಧನವಾಗಿದೆ ?<br>***ಉತ್ತರ :***<br>ಭಾಷೆಯು ಮನುಷ್ಯನಿಗೆ ತನ್ನ ಸುತ್ತಲಿನವರೊಂದಿಗೆ ವ್ಯವಹರಿಸಲು ಮತ್ತು ವಿಚಾರ ವಿನಿಮಯ ಮಾಡಲು ಅಮೂಲ್ಯ ಸಾಧನವಾಗಿದೆ. | |
| 43. | ಮನುಷ್ಯನು ಇತರೆ ಜೀವಿಗಳಿಗಿಂತ ಹೇಗೆ ಭಿನ್ನನಾಗಿದ್ದಾನೆ ?<br>***ಉತ್ತರ :***<br>ಮನುಷ್ಯನು ತನ್ನ ಮೇಧಾಶಕ್ತಿಯಿಂದ ಭಾಷೆಯನ್ನು ಬಳಸುತ್ತಿರುವುದರಿಂದ ಈ ಜಂಗಮ ಜಗತ್ತಿನಲ್ಲಿ ಇತರೆ ಜೀವಿಗಳಿಗಿಂತ ಭಿನ್ನನಾಗಿದ್ದಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 44. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | ∗ ಹಾಸಿಗೆಯಿದ್ದಷ್ಟು ಕಾಲು ಚಾಚು | |
| | ∗ ದೇಶ ಸುತ್ತು; ಕೋಶ ಓದು | |
| | ∗ ಕೈಕೆಸರಾದರೆ ಬಾಯಿ ಮೊಸರು | |
| | ***ಉತ್ತರ :*** | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿ / ಉದಾಹರಣೆ | 1 ಅಂಕ |
| | ಒಟ್ಟು | 3 ಅಂಕಗಳು |
| 45. | **ಪತ್ರ ಲೇಖನ ಬರೆಯುವುದು :** | 1 × 4 = 4 |
| | ನಿಮ್ಮನ್ನು ತಿಪಟೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಅಶ್ವಿನ್ / ಅಕ್ಷತಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯಲ್ಲಿ ಆಚರಿಸಿದ 'ಶಿಕ್ಷಕರ ದಿನಾಚರಣೆ'ಯನ್ನು ಕುರಿತು ಹಾಸನದಲ್ಲಿರುವ ನಿಮ್ಮ ತಾಯಿಯವರಿಗೊಂದು ಪತ್ರವನ್ನು ಬರೆಯಿರಿ. | |
| | ***ಅಥವಾ*** | |
| | ನಿಮ್ಮನ್ನು ತುಮಕೂರಿನ ನಿವಾಸಿ 'ಧೃವಂತ್ / ಧನ್ಯಶ್ರೀ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ ಹಾಳಾಗಿರುವ ರಸ್ತೆಗಳನ್ನು ದುರಸ್ತಿಪಡಿಸುಂತೆ ಕೋರಿ, ನಗರಸಭಾ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ / ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ವಿನ್ಯಾಸ, ಸಹಿಯೊಂದಿಗೆ ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | ***ಅಥವಾ*** | |
| | ವ್ಯಾವಹಾರಿಕ ಪತ್ರ : | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ವಿನ್ಯಾಸ, ಸಹಿಯೊಂದಿಗೆ, ಮುಕ್ತಾಯ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 46. | **ಪ್ರಬಂಧ ಬರೆವಣಿಗೆ :** | |
| | ∗ ಪರಿಸರ ಮಾಲಿನ್ಯ ಮತ್ತು ಸಂರಕ್ಷಣೆ | |
| | ∗ ಕ್ರೀಡೆಗಳು ಮತ್ತು ಅವುಗಳ ಮಹತ್ವ | |
| | ∗ ದಿನಪತ್ರಿಕೆಗಳಿಂದಾಗುವ ಪ್ರಯೋಜನಗಳು | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ಜೋಡಣೆ | 1 ಅಂಕ |
| | ಮುಕ್ತಾಯ / ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |